Rotary
2025-26

# ಮಿಡ್‌ಟೌನ್ ನ್ಯೂಸ್
# Midtown News

R.I. DISTRICT 3182 Zone-10 Club No. 21853 Charter Date : 16-05-1984
In House Bulletin of Rotary Club Shimoga Mid Town

R.I. President : Rtn. Francesco Arezzo
Dist. Governor : Rtn. Palaksha K.
Asst. Governor : Rtn. K.P. Shetty
President : Rtn. Harsha Kamath
Secretary : Rtn. Manjunath R.N.
Director : Rtn. Anil P. Shetty
Editor : Rtn. Anand I.R.
Co-Chairmen : Rtn. Narendra K.V.
Members : Rtn. Sreenag, Rtn. Raghupathi S., Rtn. K.V.L. Raju

*We meet on 2nd, 3rd and 4th Thursday at Rotary Mid Town Hall, SHIVAMOGGA-577201* rotaryshimogamidtown@gmail.com

Vol. 42 21 - 8 - 2025 ISSUE 6

## New Leadership Month

### ದಿನಾಂಕ 14-8-2025ರ ವಾರದ ಸಭೆಯ ವರದಿ

ದಿನಾಂಕ 14-8-2025ರ ವಾರದ ಸಭೆಯು ಕ್ಲಬ್ ಅಫೇರ್ಸ್ ಸಭೆಯಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರಾದ ರೊ. ಹರ್ಷ ಬಿ. ಕಾಮತ್ ಇವರು ವಹಿಸಿದ್ದರು ಹಾಗೂ ಸಭೆಗೆ ಆಗಮಿಸಿದ್ದ ಎಲ್ಲಾ ರೋಟರಿ ಸದಸ್ಯರನ್ನು ಆಹ್ವಾನಿಸಿದರು. ಮೊದಲಿಗೆ ರೊ. ಸದಾನಂದ ಸ್ವಾಮಿ ಇವರು ರೋಟರಿ ಮಾಹಿತಿಯನ್ನು ವಾಚಿಸಿದರು.

ದಿನಾಂಕ 6-8-2025ರಂದು ನಡೆದ ಆಡಳಿತ ಮಂಡಳಿ ಸಭೆಯ




ನಡಾವಳಿಯನ್ನು ಕಾರ್ಯದರ್ಶಿಗಳಾದ ರೊ. ಆರ್.ಎನ್. ಮಂಜುನಾಥ್‌ರವರು ಓದಿದರು.

ಖಜಾಂಚಿ ರೊ. ಬದರಿ ಪ್ರಸಾದ್ ಟಿ.ಎಸ್. ಅವರು ಜುಲೈ 2025ರ ಲೆಕ್ಕ




ಪತ್ರವನ್ನು ಮಂಡಿಸಿದರು ಹಾಗೂ ಅನುಮೋದನೆ ಪಡೆದರು.

ಮೆಂಬರ್‌ಶಿಪ್ ಡೆವಲೆಪ್‌ಮೆಂಟ್ ಛೇರ್‌ಮನ್ ರೊ. ಸುರೇಶ್‌ಕುಮಾರ್ ಡಿ. ಇವರ ಅನುಪಸ್ಥಿತಿಯಲ್ಲಿ ಕ್ಲಬ್ ಫೆಸಿಲಿಟೇಟರ್ ಆದ ರೊ. ಉದಯ್ ಪೇಟೆ ಅವರು ಹೊಸ ಸದಸ್ಯರ ಸೇರ್ಪಡೆಯಾಗುವವರ ವಿವರವನ್ನು ಓದಿದರು ಹಾಗೂ ಅನುಮೋದನೆಗೆ ಪಡೆದುಕೊಂಡರು.

ರೊ. ಉಜ್ವಲ ರವಿಯವರು ದಿನಾಂಕ 15-8-2025ರಂದು ವಿವಿಧ ಸಂಘ ಸಂಸ್ಥೆಗಳ ಆಶ್ರಯದೊಂದಿಗೆ **ಅಭಿಮಾನ ಪರ್ವ** ಎಂಬ ಶೀರ್ಷಿಕೆ ಅಡಿ ಸ್ವಾತಂತ್ರೋತ್ಸವ ಸಂಭ್ರಮ ಕಾರ್ಯಕ್ರಮ ಆಚರಿಸುತ್ತಿರುವ ಬಗ್ಗೆ ಮಾಹಿತಿ ನೀಡಿದರು.

ಕ್ಲಬ್ ಸರ್ವೀಸ್ ನಿರ್ದೇಶಕರಾದ ರೊ. ಅನಿಲ್ ಪಿ. ಶೆಟ್ಟಿ ಅವರು ದಿನಾಂಕ 17-8-2025ರಂದು ಶಿವಮೊಗ್ಗ ಕ್ಲಬ್ ಆಶ್ರಯದಲ್ಲಿ CSR ಹಾಗೂ

## ಮುಂದೂಡಿದ ವಾರದ ಸಭೆ

**ದಿನಾಂಕ : 23-8-2025, ಶನಿವಾರ**

**ಸಮಯ : ಸಂಜೆ 7.30ಕ್ಕೆ**

**ಶಿವಮೊಗ್ಗ ನಗರದ ಎಲ್ಲಾ 8 ರೋಟರಿ ಕ್ಲಬ್‌ಗಳ ಸಂಯುಕ್ತ ಆಶ್ರಯದಲ್ಲಿ**

**ಶ್ರಾವಣ ಚಿಂತನ ಸಮಾರೋಪ ಸಮಾರಂಭ-2025**

**ದಿವ್ಯ ಸಾನಿಧ್ಯ :**

**ಶ್ರೀಶ್ರೀ ಡಾ. ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು**

**ಉದ್ಘಾಟಕರು : ಡಾ|| ಸೌಮ್ಯ ಮಣಿ ಬಿ.ಕೆ.**

**ಡಿಸ್ಟ್ರಿಕ್ಟ್ ಛೇರ್ಮನ್, ಪಬ್ಲಿಕ್ ರಿಲೇಷನ್ ಅಂಡ್ ಪಬ್ಲಿಕ್ ಇಮೇಜ್**

**ಈ ಕೌಟುಂಬಿಕ ಭೋಜನ ಕೂಟದ ಸಭೆಗೆ ಸದಸ್ಯರು ಆ್ಯನ್ ಮತ್ತು ಆ್ಯನೆಟ್ಸ್‌ರೊಂದಿಗೆ ಪಾಲ್ಗೊಳ್ಳಲು ಕೋರಲಾಗಿದೆ.**

ತರಬೇತಿ ಕಾರ್ಯಕ್ರಮ ನಡೆಯುವ ಬಗ್ಗೆ ಮಾಹಿತಿ ನೀಡಿದರು. ಸದರಿ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಜಿಲ್ಲಾ ಗವರ್ನರ್ ಆದ ರೊ. ಪಾಲಾಕ್ಷಾ ಕೆ. ಅವರು ಆಗಮಿಸಲಿದ್ದಾರೆ ಎಂದು ತಿಳಿಸಿದರು.

ದಿನಾಂಕ 15-8-2025ರಂದು ರೋಟರಿ ಬ್ಲಡ್ ಸೆಂಟರ್ ಆವರಣದಲ್ಲಿ ನಡೆಯುವ ಸ್ವತಂತ್ರ್ಯ ದಿನಾಚರಣೆ ಕಾರ್ಯಕ್ರಮಕ್ಕೆ ನಿವೃತ್ತ ಸೇನಾ ಸಂಘದ ಅಧ್ಯಕ್ಷರಾದ ದಿನೇಶ್ ಹಾಗೂ 13 ನಿವೃತ್ತ ಸೇನಾ ಸದಸ್ಯರು ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ರೊ. ನರಹರಿ ಬೋರ್ಕರ್‌ರವರು ಮಾಹಿತಿ ನೀಡಿದರು.

ಅಧ್ಯಕ್ಷರಾದ ರೊ. ಹರ್ಷ ಕಾಮತ್ ಅವರು ದಿನಾಂಕ 23-8-2025ರಂದು ಶಿವಮೊಗ್ಗದ ಎಲ್ಲಾ 8 ರೋಟರಿ ಕ್ಲಬ್‌ಗಳ ಆಶ್ರಯದಲ್ಲಿ ನಮ್ಮ ಕ್ಲಬ್‌ನ ಸಭಾಂಗಣದಲ್ಲಿ ಶ್ರಾವಣ ಚಿಂತನ ಕಾರ್ಯಕ್ರಮವನ್ನು ನಡೆಸುವ ಬಗ್ಗೆ ವಿವರಣೆಯನ್ನು ನೀಡಿದರು.

ಮುಂದಿನ ವರ್ಷಗಳಲ್ಲಿ ನಮ್ಮ ಕ್ಲಬ್ ವತಿಯಿಂದ ಒಬ್ಬರು ಜಿಲ್ಲಾ ಗವರ್ನರ್ ಅಭ್ಯರ್ಥಿಯಾಗಿ ಮಾಡಬೇಕೆಂದು ಸಭೆಯಲ್ಲಿ ಪ್ರಸ್ತಾಪವಾಯಿತು. ಇದಕ್ಕೆ ನಮ್ಮ ಕ್ಲಬ್‌ನ ಪೂರ್ವ ಸಹಾಯಕ ಗವರ್ನರ್‌ರಾದ ರೊ. ರಾಜೇಂದ್ರ ಪ್ರಸಾದ್ ಎಂ.ಆರ್. ಅವರನ್ನು ಅಭ್ಯರ್ಥಿಯನ್ನಾಗಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಇಂದಿನ ಹಾಜರಾತಿ ಬಹುಮಾನಕ್ಕೆ ರೊ. ಶಿಲ್ಪಾ ಹೆಚ್.ಜಿ. ಮತ್ತು ರೊ. ಮುರಳಿ ಎಂ. ಇವರುಗಳು ಪಾತ್ರರಾದರು. ಕೊನೆಯಲ್ಲಿ ಕಾರ್ಯದರ್ಶಿಗಳಾದ ರೊ. ಆರ್.ಎನ್. ಮಂಜುನಾಥ್ ಇವರು ವಂದನಾರ್ಪಣೆ ನೆರವೇರಿಸಿದರು.


















14-8-2025ರಂದು ಜೈನ್ ಪಬ್ಲಿಕ್ ಶಾಲೆಯಲ್ಲಿ ಐಕ್ಯ ಇಂಟರ್ಯಾಕ್ಟ್ ಕ್ಲಬ್‌ನ ಪದಗ್ರಹಣ ಸಮಾರಂಭವನ್ನು ನಡೆಸಲಾಯಿತು. ಕಾರ್ಯಕ್ರಮವು ಕು। ಧನ್ವಿ ಅವಳ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಕು. ಪ್ರಣೀತ ಇವಳ ಸ್ವಾಗತ ಭಾಷಣದೊಂದಿಗೆ, ವೇದಿಕೆಯ ಗಣ್ಯರು ಗಿಡಕ್ಕೆ ನೀರು ಹಾಕುವ ಮೂಲಕ ಸಮಾರಂಭವನ್ನು ಉದ್ಘಾಟಿಸಿದರು. ಕು. ಜಪಿತಾ ಸುಧಾಕರ್ ಇವಳು ಕಳೆದ ಸಾಲಿನ ವರದಿಯನ್ನು ಮಂಡಿಸಿದಳು. ನಂತರ, ಮಾಜಿ ಅಸಿಸ್ಟೆಂಟ್ ಗವರ್ನರ್ ಹಾಗೂ ಪೂರ್ವಾಧ್ಯಕ್ಷರಾದ ರೊ. ರಾಜೇಂದ್ರ ಪ್ರಸಾದ್ ಎಂ.ಆರ್. ಇವರು ನೂತನ ಪದಾಧಿಕಾರಿಗಳಿಗೆ ಪದ ಗ್ರಹಣ ಸಮಾರಂಭವನ್ನು ನೆರವೇರಿಸಿದರು. ನೂತನ ಪದಾಧಿಕಾರಿಗಳಾಗಿ ಅಧ್ಯಕ್ಷೆ-ಪ್ರಣಿತ, ಉಪಾಧ್ಯಕ್ಷ-ಧನುಷ್, ಕಾರ್ಯದರ್ಶಿ-ತೇಜಸ್, ಖಜಾಂಚಿ-ಜೀವಿಕಾ, ಹಿಂದಿನ ಅಧ್ಯಕ್ಷೆ-ಜಪಿತಾ ಸುಧಾಕರ್, ನಿರ್ದೇಶಕರುಗಳಾಗಿ-ದಿಶಾ ಪಿಂಟೋ, ವಿದ್ಯಾ, ರಕ್ಷಾ, ಇಂಚರ ಮತ್ತು ಪವನ್ ಆಯ್ಕೆಯಾಗಿರುತ್ತಾರೆ. ನೂತನ ಅಧ್ಯಕ್ಷೆ ಸ್ವೀಕಾರ ಭಾಷಣ ಮಾಡಿದಳು. ನ್ಯೂಜನರೇಷನ್ ನಿರ್ದೇಶಕರಾದ ರೊ. ಶಿಲ್ಪಾ ಹೆಚ್.ಜಿ. ಇವರು ರೋಟರಿ ಮಾಹಿತಿಯೊಂದಿಗೆ ಮಕ್ಕಳಿಗೆ ಸ್ಪೂರ್ತಿದಾಯ ಸಂದೇಶ ನೀಡಿದರು. ಶಿಕ್ಷಕಿ ಅನುಪಮಾ ಅವರು ರೊ. ರಾಜೇಂದ್ರ ಪ್ರಸಾದ್ ಎಂ.ಆರ್. ಇವರು ಕಿರುಪರಿಚಯವನ್ನು ಮಾಡಿಕೊಟ್ಟರು. ರೊ. ರಾಜೇಂದ್ರ ಪ್ರಸಾದ್‌ರವರು ಇಂಟರ್ಯಾಕ್ಟ್ ಕ್ಲಬ್‌ನ ಮಹತ್ವ, ನೂತನ ಪದಾಧಿಕಾರಿಗಳ ಕಾರ್ಯಚಟುವಟಿಕೆಗಳ ಕುರಿತು ವಿವರಿಸಿದರು. ಜೈನ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಪ್ರಿಯದರ್ಶಿನಿ ಇವರು ಅಧ್ಯಕ್ಷೀಯ ಭಾಷಣ ಮಾಡಿದರು. ನಂತರ, ಕು. ಪಾವನಿ ಇವಳು ವಂದನಾರ್ಪಣೆ ಮಾಡಿದಳು. ಐಕ್ಯ ಇಂಟರ್ಯಾಕ್ಟ್ ಕ್ಲಬ್‌ನ ಕೋ-ಆರ್ಡಿನೇಟರ್ ಶಿಕ್ಷಕಿ ತಾರಾ ಅವರು ಸಮಾರಂಭವನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ರೊ. ಮಂಜುನಾಥ್ ಆರ್.ಎನ್., ಸಹಕಾರ್ಯದರ್ಶಿ ರೊ. ಸಂತೋಷ್ ಎಸ್.ಎಸ್., ಆನ್ಸ್ ಕ್ಲಬ್ ಕಾರ್ಯದರ್ಶಿಣಿ ರೊ. ಪ್ರೀತಿ ದೀಪಕ್, ರೊ. ಉಮಾ ಅಮರ್ ಹಾಗೂ ಸುಮಾರು 80 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

**Donate Blood and Save Lives**








ಸ್ವಾತಂತ್ರ್ಯ ಅಭಿಮಾನ ಪರ್ವದಲ್ಲಿ ರೋಟರಿ ಕ್ಲಬ್ ಮಿಡ್‌ಟೌನ್ ಶಿವಮೊಗ್ಗದ ಹೊಸ ದಿಕ್ಕು. ದಿನಾಂಕ 15-8-2025ರಂದು ನಡೆದ ಸ್ವಾತಂತ್ರ್ಯ ದಿನಾಚರಣೆಯ ಸಾರ್ವಜನಿಕ ಅಭಿಮಾನ ಪರ್ವ ಕಾರ್ಯಕ್ರಮದಲ್ಲಿ, ರೋಟರಿ ಕ್ಲಬ್ ಮಿಡ್‌ಟೌನ್ ಶಿವಮೊಗ್ಗ ಸದಸ್ಯರು ಭಾಗಿ ಆಗುವುದರ ಮೂಲಕ ರೋಟರಿಯ ಸಾರ್ವಜನಿಕ ಪ್ರತೀಕಕ್ಕೆ ಹೊಸ ದಿಕ್ಕು ನೀಡಿದರು ಎಂದು ಮಾಜಿ ಉಪಮುಖ್ಯಮಂತ್ರಿ ಶ್ರೀ ಕೆ.ಎಸ್. ಈಶ್ವರಪ್ಪ ಹೇಳಿದರು. ಇದೇ ಸಂದರ್ಭದಲ್ಲಿ ಕ್ಲಬ್‌ನ ಅಧ್ಯಕ್ಷರಾದ ರೊ. ಹರ್ಷ ಕಾಮತ್‌ರವರು ಸದಸ್ಯರು ಸೇವೆಯ ಜೊತೆಗೆ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರಿಂದ, ಸಮಾಜದಲ್ಲಿ ರೊಟೋರಿಯ ಕಾರ್ಯಗಳನ್ನು ಪರಿಚಯಿಸುವಲ್ಲಿ ದೊಡ್ಡ ಕೊಡುಗೆ ನೀಡಬಹುದು. ಇದರಿಂದ ಸಾರ್ವಜನಿಕ ಪ್ರತೀಕಕ್ಕೆ ಹೆಚ್ಚಿನ ಪ್ರಾಮುಖ್ಯತೆ ದೊರೆಯುತ್ತದೆ ಎಂದು ತಿಳಿಸಿದರು. ಈ ಕಾರ್ಯಕ್ರಮಕ್ಕೆ ಸುಮಾರು 2000ಕ್ಕೂ ಹೆಚ್ಚು ನಾಗರೀಕರು ಹಾಗೂ 400ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದು ವೈಶಿಷ್ಟ್ಯವಾಗಿತ್ತು. ಇಂಟರನ್ಯಾಷನಲ್ ನಿರ್ದೇಶಕರಾದ ರೊ. ಉಜ್ವಲ ರವಿ ಯಶಸ್ವಿಯಾಗಿ ಕಾರ್ಯಕ್ರಮವನ್ನು ನಿರ್ವಹಿಸಿದರು.

## 4 WAY TEST

**of the things we think, say or do :**

1. Is it the **TRUTH?**
2. Is it **FAIR** to all concerned?
3. Will it build **GOODWILL** and **BETTER FRIENDSHIPS**?
4. Will it be **BENEFICIAL** to all concerned?







ದಿನಾಂಕ 15-8-2025ರಂದು ಬೆಳಿಗ್ಗೆ 8.00 ಗಂಟೆಗೆ 79ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ನಿವೃತ್ತ ಸೇನಾ ಸಂಘದ ಅಧ್ಯಕ್ಷರಾದ ಸುಧಾಕರ್ ದಿನೇಶ್ ಹಾಗೂ 13 ಸದಸ್ಯರ ಸಮಕ್ಷಮದಲ್ಲಿ ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ನಂತರ ಸಭಾ ಕಾರ್ಯಕ್ರಮದಲ್ಲಿ ಸೇನೆಯವರ ಅನುಭವಗಳನ್ನು ಹಂಚಿಕೊಂಡರು. ಕಾರ್ಯಕ್ರಮದ ಕೊನೆಯಲ್ಲಿ ಅವರುಗಳಿಗೆ ಗೌರವ ಸಮರ್ಪಣೆ ಮಾಡಲಾಯಿತು.





**Corporate Social Responsibility (CSR)** grants can be a great way for Rotary clubs to fund service projects and make a positive impact in our communities.

In today's seminar, key note speaker DRFC of RID 3191 Rtn Kashinath Prabhu narrated well & explained how best Rotary clubs can effectively utilize these grants step by step.

By strategically using CSR grants, our clubs can enhance our ability to implement **meaningful service projects** while also supporting companies in achieving **corporate social responsibility goals.**

**It's a win-win situation for both the community and the corporate partner, fostering positive change and stronger partnerships.**

## ROTARY INFORMATION



**Rtn. Sadanada Swamy**

**Membership development in Rotary involves strategies and activities aimed at growing and strengthening Rotary clubs by attracting, engaging, and retaining members.**

This includes creating a membership plan, actively engaging members, and focusing on both recruitment and retention.

1. Creating a Membership Development Plan:
   - A formal plan outlines a club's objectives and strategies for attracting new members and keeping existing ones.
   - This plan serves as a guide for achieving membership goals and allows for tracking progress.
2. Engaging Current Members:
   - Happy members are more likely to be active and contribute to the club's success, including recruiting new members.
   - Ensure every member has a role and feels valued, and foster a welcoming and inclusive environment.
   - Provide opportunities for personal and professional growth, as Rotary offers unique learning and leadership development experiences.
3. Retention Strategies :
   - Actively involve new members in club activities and committees.
   - Regularly assess member satisfaction and address any concerns or issues.
   - Conduct exit interviews to understand why members leave and identify areas for improvement.

By focusing on these key areas, Rotary clubs can effectively grow their membership and ensure a vibrant future.



2025ರ ಜುಲೈ 1 ಮತ್ತು 2 ರಂದು ದ್ವಿತೀಯ ಪದವಿ ಪೂರ್ವ ಸರ್ಕಾರಿ ಕಾಲೇಜಿನಲ್ಲಿ , ದಿನಾಂಕ 7-7-2025ರಂದು ಸಹ್ಯಾದ್ರಿ ಪ್ರೌಢ ಶಾಲೆಯ 10ನೇ ತರಗತಿ ವಿದ್ಯಾರ್ಥಿಗಳಿಗೆ, ದಿನಾಂಕ 8-7-2025ರಂದು ಕೇಂದ್ರಿಯ ವಿದ್ಯಾಲದ 10,11 ಮತ್ತು 12ನೇ ತರಗತಿ ವಿದ್ಯಾರ್ಥಿಗಳಿಗೆ ಹಾಗೂ 14-7-2025ರಂದು ದಿಶಾ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ **"Unlocking Power of Mind"** ಕಾರ್ಯಗಾರವನ್ನು ರೋಟರಿ ಕ್ಲಬ್ ಶಿವಮೊಗ್ಗ ಮಿಡ್‌ಟೌನ್‌ನ ಸಹಯೋಗದೊಂದಿಗೆ ಸಹಕಾರ್ಯದರ್ಶಿಗಳಾದ ರೊ. ಸಂತೋಷ್ ಎಸ್.ಎಸ್. ರವರು ನಡೆಸಿಕೊಟ್ಟಿರುತ್ತಾರೆ.

### ROTARIAN BIRTHDAY *Greetings to*

| | |
|---|---|
| Rtn. Dr. Harish M. | Aug-18 |
| Rtn. Kavana Rajashri | Aug-20 |

### MARRIAGE ANNIVERSARY *Greetings to*

| | |
|---|---|
| Rtn. Manjunath R.N. | Aug-15 |
| Ann. Vidya | |